


ಚಿಕ್ಕವನಿಂದಲೂ ನೋಡುತ್ತ ಬಂದಿದ್ದರೂ, ಪ್ರಾಥಮಿಕ ಶಾಲಾ ಹಂತದಲ್ಲಿ ಆ ಪ್ರತಿಮೆಯೆಂದರೆ ಏನೋ ಒಂದು ರೀತಿಯ ಕೌತುಕ. ಯಾಕೆಂದರೆ ಆ ಪ್ರತಿಮೆಯ ನಿಲುವು, ಕುಳಿತಿರುವ ಆ ಭಂಗಿ, ತಲೆಯ ಮೇಲಿನ ಲೋಹದ ಶಿರಸ್ತ್ರಾಣದ ಮೋಹಕತೆಯನ್ನು ಬೆರಗುಗಣ್ಣಿನಿಂದ ನೋಡುತ್ತಿದ್ದರೆ, ಮುಂದೆ ಹೈಸ್ಕೂಲಿನಲ್ಲಿ ಅವರ ಕುರಿತಾದ ಪಾಠವೊಂದು ಅವನಿಗೆ ಪಠ್ಯವಾಗಿತ್ತು. ಮುಂದೆ ಕಾಲೇಜಿಗೆ ಬಂದಾಗ ಆ ಪ್ರತಿಮೆಯನ್ನು ನೋಡುವುದೇ ಹೆಮ್ಮೆಯೆನಿಸುತ್ತಿತ್ತು. ಕಾಲೇಜು ಶಿಕ್ಷಣ, ಪದವಿ ಆದ ನಂತರ ಅದೇ ಊರಲ್ಲಿಯೇ ಉಪನ್ಯಾಸಕನಾಗಿ ಸೇರಿದ ಮೇಲೆ ಆ ಪ್ರತಿಮೆಯನ್ನು ತುಂಬಾ ಗೌರವದಿಂದ ನೋಡುತ್ತಾ ಪ್ರತಿಮೆಯೊಂದಿಗೆ ಏನೋ ಒಂದು ತರಹದ ಅವಿನಾಭಾವ ಸಂಬಂಧವೇ ಉಂಟಾಗಿತ್ತು.

ಎಂಬತ್ತರ ದಶಕದಿಂದಲೂ ಅಲ್ಲಿ ನಡೆದಂಥ ಎಲ್ಲ ಘಟನೆಗಳಿಗೂ ಸಾಕ್ಷಿಯಾಗಿ ಇತಿಹಾಸವನ್ನು ಹೇಳುತ್ತಿದೆ ಆ ಪ್ರತಿಮೆ. ರಾಜಕೀಯ ನಾಯಕರ ಸಮಾರಂಭ, ಕನ್ನಡಪರ ಚಳವಳಿಗಾರರ ಹೋರಾಟಗಳು ಅದರಲ್ಲೂ ಗೋಕಾಕ ಚಳವಳಿ ಸಮಯದಲ್ಲಿ ಡಾ.ರಾಜಕುಮಾರ ಮತ್ತು ಇತರ ನಾಯಕ ನಟರೆಲ್ಲ ಈ ನಗರಕ್ಕೆ ಬಂದಾಗ ಈ ಪ್ರತಿಮೆಗೆ ಹಾರ ಹಾಕಿ ಇಲ್ಲಿಂದಲೇ ತಮ್ಮ ಪಾದಯಾತ್ರೆ ಪ್ರಾರಂಭಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದು ಇನ್ನೂ ಹಚ್ಚ ಹಸಿರು. ಜೊತೆಗೆ ಖಾಸಗಿ ಕಾರ್ಯಕ್ರಮಗಳ ಒಳಿತು ಕೆಡುಕು ಘಟನೆಗಳಿಗೆ ಏಕಮಾತ್ರ ಸಾಕ್ಷಿಯೆಂದರೆ ಈ ಪ್ರತಿಮೆ ಮಾತ್ರ. ಆ ಕಾರಣದಿಂದಲೇ ಜಗದೀಶ ಆ ಪ್ರತಿಮೆಯನ್ನು ನೋಡದೆ ಒಂದು ದಿನವೂ ತನ್ನ ಮನೆಯತ್ತ ಹೋಗಿದ್ದಿಲ್ಲ. ಆ ರೀತಿ ಹೋದರೆ ಆತನ ಬೆಳಗಿನ ವಾಕಿಂಗ್ ಅಪೂರ್ಣವೆನಿಸುತಿತ್ತು. ಆ ಕಾರಣದಿಂದಲೇ ಆತನಿಗೆ ಆ ಪ್ರತಿಮೆಯೆಂದರೆ ಎಲ್ಲಿಲ್ಲದ ಭಕ್ತಿ ಮತ್ತು ಗೌರವ.

ಪ್ರತಾಪ್‌ಮೋಹನ್ ಪಾಟೀಲ್ ಅವರದು ಇದೇ ಊರು. ದೊಡ್ಡ ಶ್ರೀಮಂತ ಮನೆತನ. ಅವರ ತಂದೆ ರಾಮಮೋಹನ್ ಅವರು ಸ್ವಾತಂತ್ರ ಹೋರಾಟಗಾರರು. ಚಲೇಜಾವ್ ಚಳವಳಿಯಲ್ಲಿ ಸಕ್ರಿಯವಾಗಿ ಹೋರಾಟ ಮಾಡಿದ್ದಲ್ಲದೆ ಅನೇಕ ಹೋರಾಟಗಾರರನ್ನು ಚಳವಳಿಗೆ ಧುಮುಕುವಂತೆ ಮಾಡಿ ಯಶಸ್ಸು ಕಂಡವರು. ಮಹಾನ